ಪ್ರಕರಣಗಳು ಬಹಳಷ್ಟು ಆಗುತ್ತಿದೆ ಈ ಸಮಸ್ಯೆ ಬಗ್ಗೆ ಮಾನ್ಯ ಮಂತ್ರಿಗಳು ಏನು ಕ್ರಮ ತೆಗೆದುಕೊಳ್ಳುತ್ತಾರೆನ್ನುವ ಬಗ್ಗೆ ತಿಳಿಸಬೇಕು.

ಶ್ರೀ ಬಿ. ರಮಾನಾಥ ರೈ :- ಸನ್ಮಾನ್ಯ ಸಭಾಧ್ಯಕ್ಷರೇ, ಭಾಲ್ಕಿ ಬಸ್ ನಿಲ್ದಾಣವನ್ನು ಅಭಿವೃದ್ಧಿಪಡಿಸಬೇಕು ಎನ್ನುವ ವಿಚಾರದಲ್ಲಿ ಸರ್ಕಾರ ಗಮನ ಹರಿಸಿದೆ. ಅಲ್ಲಿ ಗಡಸು ನೆಲವನ್ನು ರಚನೆ ಮಾಡಲು ಈಗಾಗಲೇ ಎರಡು ಲಕ್ಷ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ. ಅದನ್ನು ಡಾಂಬರೀಕರಣಗೊಳಿಸಲು ನಾಲ್ಕು ಲಕ್ಷ ರೂಪಾಯಿಗಳನ್ನು ನಿಗದಿಪಡಿಸಿದ್ದು, ಅದಕ್ಕೆ ಟೆಂಡರ್ ಕರೆಯಲಾಗಿದೆ. ಹೆಚ್ಚಿಗೆ ಸೋಡಿಯಂ ಲೈಟ್‌ಗಳನ್ನು ಹಾಕಲು ವ್ಯವಸ್ಥೆ ಮಾಡಿದ್ದೇವೆ. ಬಸ್ ನಿಲ್ದಾಣದಲ್ಲಿ ಶೌಚಾಲಯಗಳು ಇಲ್ಲವೆಂದು ಹೇಳಿದಿರಿ. ಆರು ಲಕ್ಷ ರೂಪಾಯಿಗಳ ವೆಚ್ಚದಲ್ಲಿ 'ಸುಲಭ್ ಶೌಚಾಲಯ'ಗಳನ್ನು ನಿರ್ಮಾಣ ಮಾಡಲು ನಾವು ಕ್ರಮವನ್ನು ತೆಗೆದುಕೊಂಡಿದ್ದೇವೆ. ನಾನು ತಿಳಿದುಕೊಂಡ ಹಾಗೆ, ಬಸ್ ನಿಲ್ದಾಣವಿರುವ ಪ್ರದೇಶದಲ್ಲಿ ಜಾಗದ ಅಭಾವವಿದೆ. ಒಂದು ಕಡೆ ಕೇಂದ್ರ ಸ್ಥಾನವಿದೆ, ಇನ್ನೊಂದು ಕಡೆ ಶಾಲೆ ಇದೆ. ಆ ಜಾಗವನ್ನು ನಾವು ತೆಗೆದುಕೊಳ್ಳಲು ಬರುವುದಿಲ್ಲ. ಇದ್ದ ಜಾಗದಲ್ಲೇ ಏನು ವ್ಯವಸ್ಥೆ ಮಾಡಬಹುದೋ ಅದನ್ನು ಮಾಡತಕ್ಕಂಥ ಪ್ರಯತ್ನವನ್ನು ನಾವು ಈಗಾಗಲೇ ಮಾಡುತ್ತಿದ್ದೇವೆ. ಅದಕ್ಕೆ ಪ್ರತ್ಯೇಕವಾದಂಥ ಸ್ಥಳವಿದೆ ಎನ್ನುವ ಬಗ್ಗೆ ಈಗ ತಾವು ಸೂಚನೆಯನ್ನು ಕೊಟ್ಟಿದ್ದೀರಿ. ಆ ಜಾಗವನ್ನು ತೆಗೆದುಕೊಂಡು ಅಭಿವೃದ್ಧಿ ಮಾಡಬಹುದು ಎನ್ನುವ ಮಾತನ್ನು ತಾವು ಹೇಳಿದಿರಿ. ಅದರ ಸಾಧಕಬಾಧಕಗಳನ್ನು ನಾವು ಪರಿಶೀಲನೆ ಮಾಡಿ ಏನು ಕ್ರಮ ಕೈಗೊಳ್ಳಬೇಕೋ ಅದನ್ನು ಕೈಗೊಳ್ಳಲು ಪ್ರಯತ್ನಿಸುತ್ತೇವೆ.

ಶ್ರೀ ಪ್ರಕಾಶ್ ಖಂಡ್ರೆ :- ಅಲ್ಲಿ ಒಂದು ಪೊಲೀಸ್ ಔಟ್‌ಪೋಸ್ಟ್ ಬೇಕಾಗಿದೆ. ಅಲ್ಲಿ ಗೂಂಡಾಗಳು ರಾತ್ರಿಯ ಹೊತ್ತು ಹೆಣ್ಣುಮಕ್ಕಳಿಗೆ ತೊಂದರೆ ಕೊಡುತ್ತಿದ್ದಾರೆ. ದಯವಿಟ್ಟು ಅದರ ಬಗ್ಗೆ ಗಮನ ಹರಿಸಬೇಕು.

ಶ್ರೀ ಜಗದೀಶ್ ಶೆಟ್ಟರ್ :- ಬಸ್ ನಿಲ್ದಾಣದಲ್ಲಿ ಸಾರ್ವಜನಿಕರಿಗೆ ತೊಂದರೆಯಾಗುತ್ತಿದೆ, ಅದರಲ್ಲೂ ವಿಶೇಷವಾಗಿ ಹೆಣ್ಣುಮಕ್ಕಳಿಗೆ ತೊಂದರೆಯಾಗುತ್ತಿದೆ. ಅವರ ರಕ್ಷಣೆಯ ಸಲುವಾಗಿ ಒಂದು ಪೊಲೀಸ್ ಔಟ್‌ಪೋಸ್ಟ್ ಬೇಕು ಎಂದು ಮಾನ್ಯ ಸದಸ್ಯರು ಕೇಳುತ್ತಿದ್ದಾರೆ. ತಾವೂ ಇಲ್ಲಿ ಇದ್ದೀರಿ, ಮಾನ್ಯ ಖರ್ಗೆಯವರೂ ಇಲ್ಲೇ ಇರುವುದರಿಂದ ಅದರ ಬಗ್ಗೆ ವಿಚಾರ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಬಿ. ರಮಾನಾಥ ರೈ :- ಪೊಲೀಸ್ ಔಟ್‌ಪೋಸ್ಟ್ ಕೊಡುವಂಥಾದ್ದು ಗೃಹ ಇಲಾಖೆಗೆ ಸೇರಿದಂಥ ವಿಚಾರವಾಗಿದೆ.

ಅಧ್ಯಕ್ಷರು :- ಆ ಬಗ್ಗೆ ಅವರಿಗೆ ಪತ್ರ ಬರೆಯಿರಿ.

ಬೆಂಗಳೂರಿನ ಮಹಾತ್ಮಗಾಂಧಿ ರಸ್ತೆಯಲ್ಲಿರುವ ಪಬ್ಲಿಕ್ ಯುಟಿಲಿಟಿ ಕಟ್ಟಡದಲ್ಲಿ ಸ್ವಚ್ಛತೆ ಕಾಪಾಡುವ ಬಗ್ಗೆ

81 (362) ಶ್ರೀ ಪಿ.ಸಿ. ಮೋಹನ್ (ಚಿಕ್ಕಪೇಟೆ) ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ನಗರದ ಮಹಾತ್ಮಾಗಾಂಧಿ ರಸ್ತೆಯಲ್ಲಿರುವ 24 ಅಂತಸ್ತಿನ ಕಟ್ಟಡ (ಪಬ್ಲಿಕ್ ಯೂಟಿಲಿಟಿ ಕಟ್ಟಡ) ಯಾರ ಉಸ್ತುವಾರಿಯಲ್ಲಿದೆ ;

ಆ) ಈ ಕಟ್ಟಡದಲ್ಲಿ ಎಷ್ಟು ಮಳಿಗೆಗಳು, ಸರ್ಕಾರಿ ಕಛೇರಿಗಳು ಇದೆ ;

ಇ) ಕಟ್ಟಡದ ಮಳಿಗೆಗಳಿಂದ ಪ್ರತಿ ತಿಂಗಳು ವಸೂಲಾಗುತ್ತಿರುವ ಬಾಡಿಗೆ ಎಷ್ಟು ;

ಈ) ಎಲ್ಲೆಂದರಲ್ಲಿ ಕಸದ ರಾಶಿಗಳಿಂದ ಸಂಪೂರ್ಣ ಹದಗೆಟ್ಟಿದ್ದು ಸ್ವಚ್ಛತೆ ಕಾಪಾಡಲು ಕೈಗೊಂಡ ಕ್ರಮಗಳೇನು ?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) :

ಅ) ನಗರದ ಮಹಾತ್ಮಾಗಾಂಧಿ ರಸ್ತೆಯಲ್ಲಿರುವ 24 ಅಂತಸ್ತಿನ ನೇತಾಜಿ ಸುಭಾಷ್ ಚಂದ್ರಬೋಸ್ ಕಟ್ಟಡ (ಪಿ.ಯು.ಬಿ.) ಮಹಾನಗರ ಪಾಲಿಕೆಯ ಉಸ್ತುವಾರಿಯಲ್ಲಿದೆ.

ಆ) ಈ ಕಟ್ಟದಲ್ಲಿ 104 ಮಳಿಗೆಗಳು ಹಾಗೂ 8 ಸರ್ಕಾರಿ ಕಛೇರಿಗಳಿವೆ.

ಇ) ಕಟ್ಟಡದ ಮಳಿಗೆಗಳಿಂದ ಪ್ರತಿ ತಿಂಗಳಿಗೆ ರೂ. 7,32,000-00 ಗಳ ಬಾಡಿಗೆ ವಸೂಲಾತಿಯಾಗುತ್ತದೆ.

ಈ) ಹೆಚ್ಚಿನ ಸ್ವಚ್ಛತೆಯನ್ನು ಕಾಪಾಡುವ ಸಲುವಾಗಿ ಸ್ವಚ್ಛತಾ ಕಾರ್ಯವನ್ನು ಖಾಸಗೀಕರಣಗೊಳಿಸಲು ಪಾಲಿಕೆಯು ತೀರ್ಮಾನಿಸಿದ್ದು, ಈ ಬಗ್ಗೆ ಟೆಂಡರ್ ಪ್ರಕ್ರಿಯೆಯನ್ನು ಪ್ರಾರಂಭಿಸಲಾಗಿದೆ.

ಶ್ರೀ ಪಿ.ಸಿ. ಮೋಹನ್ :- ಮಾನ್ಯ ಅಧ್ಯಕ್ಷರೇ, ಪಬ್ಲಿಕ್ ಯುಟಿಲಿಟಿ ಬಿಲ್ಡಿಂಗ್‌ನಲ್ಲಿ ಎಲ್ಲೆಂದರಲ್ಲಿ ಕಸದ ರಾಶಿಗಳಿಂದ ಸಂಪೂರ್ಣ ಹದಗೆಟ್ಟಿದ್ದು ಸ್ವಚ್ಛತೆ ಕಾಪಾಡಲು ಕೈಗೊಂಡ ಕ್ರಮಗಳೇನು ಎಂದು ನಾನು ಕೇಳಿದ್ದರೆ, ಹೆಚ್ಚಿನ ಸ್ವಚ್ಛತೆಯನ್ನು ಕಾಪಾಡುವ ಸಲುವಾಗಿ ಸ್ವಚ್ಛತಾ ಕಾರ್ಯವನ್ನು ಖಾಸಗೀಕರಣಗೊಳಿಸಲು ಪಾಲಿಕೆಯು ತೀರ್ಮಾನಿಸಿದ್ದು, ಈ ಬಗ್ಗೆ ಟೆಂಡರ್ ಪ್ರಕ್ರಿಯೆಯನ್ನು ಪ್ರಾರಂಭಿಸಲಾಗಿದೆ ಎನ್ನುವ ಉತ್ತರವನ್ನು ಕೊಟ್ಟಿದ್ದಾರೆ. ಹಾಗಾದರೆ, ಅಲ್ಲಿ ಈ ಹಿಂದೆ ಯಾರೂ ಮೈನ್‌ಟಿನೆನ್ಸ್ ಮಾಡಿರಲಿಲ್ಲವೇ ? ಮಾಡಿರದಿದ್ದರೆ, ಸಂಬಂಧಿಸಿದ ಅಧಿಕಾರಿಗಳ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ ಎನ್ನುವ ಪ್ರಶ್ನೆಯನ್ನು ಕೇಳಲು ಇಚ್ಛಿಪಡುತ್ತೇನೆ. ನಗರಪಾಲಿಕೆ ಇಡೀ ಬೆಂಗಳೂರು ನಗರವನ್ನು ಸ್ವಚ್ಛವಾಗಿಡಬೇಕು. ಆದರೆ, ಅವರ ಸ್ವಂತ ಕಟ್ಟಡವನ್ನೇ ಸ್ವಚ್ಛವಾಗಿ ಇಡದೇ ಇರುವವರು ಬೆಂಗಳೂರು ಮಹಾನಗರವನ್ನು ಸ್ವಚ್ಛವಾಗಿಡುತ್ತಾರೆಯೇ ಎಂದು ಕೇಳಲು ನಾನು ಇಚ್ಛಿಪಡುತ್ತೇನೆ.

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) :- ಮಹಾನಗರಪಾಲಿಕೆ ಮತ್ತು ಸರ್ಕಾರೀ ಕಟ್ಟಡಗಳಲ್ಲಿ ಸ್ವಚ್ಛತೆಗೆ ವಿಶೇಷವಾದ ಗಮನ ಕೊಡಬೇಕು ಎಂದು ನಾವು ಈಗಾಗಲೇ ತಿಳಿಸಿದ್ದೇವೆ. ಕೆಲವು ಕಡೆ ತೃಪ್ತಿಕರವಾಗಿ ಕೆಲಸ ನಡೆಯುತ್ತವೆ, ಕೆಲವು ಕಡೆ ತೃಪ್ತಿಕರವಾಗಿ ಕೆಲಸಗಳು ನಡೆಯುವುದಿಲ್ಲ. ಪಬ್ಲಿಕ್ ಯುಟಿಲಿಟಿ ಕಟ್ಟಡ ಸುಮಾರು 30 ವರ್ಷಗಳಷ್ಟು ಹಳೆಯ ಕಟ್ಟಡವಾಗಿದೆ. ಇತ್ತೀಚೆಗೆ ಮಹಾನಗರಪಾಲಿಕೆಯ ಕಮೀಷನರ್‌ರವರು ಅಲ್ಲಿಗೆ ಹೋಗಿ ನೋಡಿ, ಅದರ ಸ್ವಚ್ಛತೆ, ಭದ್ರತೆ, ಸೇಫ್ಟಿ ಲಿಫ್ಟ್, ಫೈರ್ ಫೋರ್ಸ್ ಇವುಗಳೆಲ್ಲದರ ವಿಚಾರದಲ್ಲೂ ವಿಶೇಷವಾದ ಗಮನವನ್ನು ಹರಿಸಿದ್ದಾರೆ.

ಶ್ರೀ ಆರ್. ಅಶೋಕ್ :- ಇದು ಬಹಳ ದೊಡ್ಡದಾದ ಕಟ್ಟಡ ಎಂದು ಹಳ್ಳಿಗಾಡುಗಳಿಂದ ಬಂದಿರುವ ಜನರು ಅದನ್ನು ನೋಡಲು ಬರುತ್ತಾರೆ. ಆ ಕಟ್ಟಡದ ಒಳಗೆ ಹೋದರೆ ಒಂದು ರೀತಿಯ ಪೊಲ್ಯೂಷನ್ ಇರುವುದನ್ನು ನಾವು ನೋಡುತ್ತೇವೆ. ವಿಚಿತ್ರವೆಂದರೆ, ಪೊಲ್ಯೂಷನ್ ಕಂಟ್ರೋಲ್ ಬೋರ್ಡ್ ಆ ಕಟ್ಟಡದಲ್ಲೇ ಇದೆ. ನಾನೇ ಸ್ವತ ಅಲ್ಲಿಗೆ ಹೋಗಿ ನೋಡಿದ್ದರಿಂದ ಹೇಳುತ್ತಿದ್ದೇನೆ, ಆ ಕಟ್ಟಡದ 5, 6, 7ನೇ ಮಹಡಿಗೆ ಹೋಗಿ ಅಲ್ಲಿನ ಗೋಡೆಯನ್ನು ಮುಟ್ಟಿದ್ದರೆ ಸಾಕು ಸಾಯುತ್ತಾರೆ. ಅಷ್ಟರಮಟ್ಟಿಗೆ ಕರೆಂಟ್ ಲೈನ್‌ಗಳು ಬಿದ್ದುಹೋಗಿವೆ. ಅಲ್ಲಿನ ಟಾಯ್‌ಲೆಟ್‌ಗಳನ್ನು ಉಪಯೋಗ ಮಾಡಲು ಸಾಧ್ಯವೇ ಇಲ್ಲದಂಥ ಸ್ಥಿತಿಯಲ್ಲಿವೆ. ಕರ್ನಾಟಕದಿಂದ ಬಂದ ಜನರೆಲ್ಲರೂ, ಇಡೀ ಬೆಂಗಳೂರಿನಲ್ಲಿರುವ ದೊಡ್ಡ ಕಟ್ಟಡ ಇದು ಎಂದು ಇದನ್ನು ನೋಡಲು ಬರುತ್ತಾರೆ. ಆದರೆ 'ಹೊರಗೆಲ್ಲೂ ಥಳಕು, ಒಳಗೆಲ್ಲಾ ಹುಳುಕು' ಎನ್ನುವಂತೆ ಅದರ ಪರಿಸ್ಥಿತಿ ಇದೆ. ಕಸವನ್ನು ತೆಗೆದು ಸ್ವಚ್ಛತೆ ಕಾಪಾಡಲು ಟೆಂಡರ್ ಕರೆಯಲಾಗುವುದು ಎನ್ನುವ ಮಾತನ್ನು ಅವರ ಉತ್ತರದಲ್ಲಿ ಹೇಳಿದ್ದಾರೆ. ಅಂದರೆ, ಇಷ್ಟು ದಿನಗಳ ಕಾಲ ಟೆಂಡರ್ ಕರೆದಿರಲಿಲ್ಲವೇ ? ಕರೆದಿದ್ದರೆ, ಇಲ್ಲಿಯವರೆಗೆ ಆ ಕಟ್ಟಡವನ್ನು ಏಕೆ ಕ್ಲೀನ್ ಮಾಡಲಿಲ್ಲ ? ಎರಡು ತಿಂಗಳ ಹಿಂದೆ ನಾವು ಮಾನ್ಯ ಮಂತ್ರಿಗಳನ್ನು ಭೇಟಿ ಮಾಡಿದಂಥ ಸಂದರ್ಭದಲ್ಲಿ, ಇಡೀ ಬೆಂಗಳೂರನ್ನು ಶುದ್ಧ ಮಾಡಲು ಗ್ಲೋಬಲ್ ಟೆಂಡರ್ ಕರೆಯಲಾಗುವುದು ಎಂದು ಹೇಳಿದ್ದರು. ಎರಡು ತಿಂಗಳು ಆದಮೇಲೂ ಇದೇ ಉತ್ತರ ಬರುತ್ತಿದೆ. ಮಾನ್ಯ ಮುಖ್ಯಮಂತ್ರಿಗಳು ದಯವಿಟ್ಟು ಈ ಕಡೆಗೆ ಗಮನ ಹರಿಸಬೇಕು. ಟೆಂಡರ್ ಕ್ಲೋಸ್ ಆಗಿ ಆರು ತಿಂಗಳಾಗಿದೆ. ಆರು ತಿಂಗಳಿಂದ ಕಾರ್ಪೊರೇಷನ್ನಿನವರು ಏನು ಮಾಡುತ್ತಿದ್ದಾರೆ ? ಆರು ತಿಂಗಳ ಹಿಂದೆಯೇ ಟೆಂಡರ್ ಕ್ಲೋಸ್ ಆಗುತ್ತದೆ ಎನ್ನುವುದು ಗೊತ್ತಿದ್ದರೂ ಸಹ ಅದರ ಬಗ್ಗೆ ಅಧಿಕಾರಿಗಳು ಏಕೆ ಎಚ್ಚರ ವಹಿಸಲಿಲ್ಲ ? ಎಚ್ಚರ ವಹಿಸದೇ ಇರುವ ಕಾರಣದಿಂದ, ಟೆಂಡರ್ ಪ್ರಾಬ್ಲಂ ಆಗಿ, ಮೊದಲಿದ್ದವರನ್ನೇ ಎಕ್ಸ್‌ಟೆಂಡ್ ಮಾಡುವಂಥ ಟೆಂಡರ್ ಲಾಬಿ ನಡೆಯುತ್ತಿದೆ. ಬೆಂಗಳೂರಿನಲ್ಲಿ ಕಸ ಎತ್ತಲು 30-40 ಕೋಟಿ ರೂಪಾಯಿಗಳನ್ನು ಇಟ್ಟಿರುವುದರಿಂದ ಅದಕ್ಕೇ ಒಂದು ಲಾಬಿ ನಡೆಯುತ್ತಿದೆ. ಯಾರು ಕಸ ಎತ್ತಬೇಕು ಎನ್ನುವ ವಿಚಾರದಲ್ಲಿ ಲಾಬಿ ಮಾಡುತ್ತಾರೆ. ಆ ರೀತಿಯ ಪರಿಸ್ಥಿತಿ ನಿರ್ಮಾಣವಾಗಿದೆ. ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಗಮನ ಹರಿಸಿ, ಬಿಗಿ ನಿಲುವನ್ನು ತೆಗೆದುಕೊಂಡು ಕೂಡಲೇ ಟೆಂಡರ್ ಕರೆಯುವಂಥ ವ್ಯವಸ್ಥೆಯನ್ನು ಮಾಡಬೇಕು ಮತ್ತು ಬೆಂಗಳೂರನ್ನು ಶುದ್ಧವಾಗಿಡಬೇಕು ಎಂದು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ. ಗುರುಸ್ವಾಮಿಯವರು ಪ್ರಶ್ನೆ ಕೇಳಲು ಎದ್ದು ನಿಂತರು)

ಅಧ್ಯಕ್ಷರು :- ಈ ಪ್ರಶ್ನೆಗೆ ಸಂಬಂಧಿಸಿದಂತೆ ಬೆಂಗಳೂರು ಸಿಟಿಯವರು ಉಪಪ್ರಶ್ನೆಯನ್ನು ಕೇಳಲಿ. ತಮಗೆ ಅನುಮತಿ ಕೊಟ್ಟರೆ, ಪ್ರತಿಯೊಂದು ಜಿಲ್ಲಾ ಹೆಡ್‌ಕ್ವಾರ್ಟರ್ಸ್‌ನವರೂ ಕೇಳುತ್ತಾರೆ.

ಶ್ರೀ ಸಿ. ಗುರುಸ್ವಾಮಿ :- ರಾಜ್ಯದ ರಾಜಧಾನಿಯಾದ್ದರಿಂದ ಕೇಳುತ್ತಿದ್ದೇನೆ.

ಅಧ್ಯಕ್ಷರು :- ರಾಜಧಾನಿ ಇರಬಹುದು. ಆದರೆ ರಾಜಧಾನಿಯವರೇ ಸುಮಾರು 15 ಜನ ಎಂ.ಎಲ್.ಎಗಳಿದ್ದಾರೆ.

ಶ್ರೀ ಸಿ. ಗುರುಸ್ವಾಮಿ :- ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ಒಂದು ವಿಷಯವನ್ನು ತರುತ್ತೇನೆ. ಆ ಕಟ್ಟಡದಲ್ಲಿ ಸಾಕಷ್ಟು ಆತ್ಮಹತ್ಯೆ ಪ್ರಕರಣಗಳೂ ನಡೆಯುತ್ತಿವೆ. ಅದನ್ನು ತಡೆಗಟ್ಟಲು ಕ್ರಮ ತೆಗೆದುಕೊಳ್ಳಬೇಕು ಎಂದು ಮಾನ್ಯ ಮುಖ್ಯಮಂತ್ರಿಗಳನ್ನು ಕೇಳುತ್ತಿದ್ದೇನೆ.

ಶ್ರೀ ಎಸ್.ಎಂ. ಕೃಷ್ಣ :- ಸರ್ಕಾರೀ ಮತ್ತು ಕಾರ್ಪೋರೇಷನ್ ಕಟ್ಟಡಗಳಲ್ಲಿ ಬಹಳ ನ್ಯೂನ್ಯತೆಗಳಿರುತ್ತವೆ. ಆ ನ್ಯೂನ್ಯತೆಗಳೆಲ್ಲವನ್ನೂ ಸರಿಪಡಿಸಲು ಅವರವರೇ ಕಾರ್ಯಕ್ರಮ ಹಾಕಿಕೊಳ್ಳಬೇಕಾಗಿರುತಕ್ಕಂಥ, ಹಂಚಿಕೊಳ್ಳಬೇಕಾಗಿರತಕ್ಕಂಥ ಜವಾಬ್ದಾರಿಯಾಗಿದೆ. ಸುಮಾರು ಒಂದೂವರೆ-ಎರಡು ತಿಂಗಳ ಹಿಂದೆ, ನನ್ನ ಗಮನಕ್ಕೆ ಈ ವಿಚಾರ ಬಂದಾಗ ನಾನು ಕಾರ್ಪೋರೇಷನ್ ಕಮೀಷನರ್‌ರವರಿಗೆ ಒಂದು ಸೂಚನೆಯನ್ನು ಕೊಟ್ಟಿದ್ದು, ಈ ಕಟ್ಟಡದ ಸೇಫ್ಟಿ ಮತ್ತು ಉಪಯುಕ್ತತೆ ಇನ್ನೂ ಹೆಚ್ಚಾಗಬೇಕು ಎನ್ನುವ ದೃಷ್ಟಿಯಿಂದ ಅವರು ಕಾರ್ಯೋನ್ಮುಖರಾಗಿದ್ದಾರೆ. ಮುಂದಿನ ದಿನಗಳಲ್ಲಿ ಗಮನಾರ್ಹವಾದಂಥ ಒಂದು ಇಂಪ್ರೂವ್‌ಮೆಂಟನ್ನು ನಾವು ನೀವೆಲ್ಲರೂ ನೋಡಬಹುದು.

ಬೇಲೂರು ತಾಲ್ಲೂಕಿನ ಅಗ್ನಿ ಶಾಮಕ ಠಾಣೆ ಕಟ್ಟಡ ನಿರ್ಮಾಣ

82 (334) ಶ್ರೀ ಪುಟ್ಟರಂಗನಾಥ ಎಸ್.ಹೆಚ್. (ಬೇಲೂರು) ಮಾನ್ಯ ಗೃಹ ಮತ್ತು ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೇಲೂರು ತಾಲ್ಲೂಕಿಗೆ ಅಗ್ನಿಶಾಮಕ ಠಾಣೆ ಮಂಜೂರಾಗಿದ್ದು ಕಟ್ಟಡ ನಿರ್ಮಾಣಕ್ಕೆ ಈ ಸಾಲಿನಲ್ಲಿ ಅನುಧಾನ ಮಂಜೂರು ಮಾಡಲಾಗಿದೆಯೇ ;

ಆ) ಹಾಗಿಲ್ಲದ್ದಲ್ಲಿ ಮಂಜೂರು ಮಾಡಲು ಕ್ರಮ ಕೈಗೊಳ್ಳಲಾಗುವುದೇ ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಮತ್ತು ಸಣ್ಣ ನೀರಾವರಿ ಸಚಿವರು) :

ಅ) ಇಲ್ಲ.

ಆ) ಮುಂದಿನ ವರ್ಷಗಳಲ್ಲಿ ಹಣಕಾಸಿನ ಲಭ್ಯತೆಗೊಳಪಟ್ಟು ಕಟ್ಟಡ ನಿರ್ಮಾಣಕ್ಕೆ ಅನುದಾನ ಒದಗಿಸುವುದನ್ನು ಪರಿಶೀಲಿಸಲಾಗುವುದು.

ಶ್ರೀ ಎಸ್.ಹೆಚ್. ಪುಟ್ಟರಂಗನಾಥ್ :- ತಾವು ಉತ್ತರ ಕೊಡತಕ್ಕಂಥ ಕಾಲದಲ್ಲಿ, 'ಮುಂದಿನ ವರ್ಷಗಳಲ್ಲಿ ಹಣಕಾಸಿನ ಲಭ್ಯತೆಗೊಳಪಟ್ಟು ಕಟ್ಟಡ ನಿರ್ಮಾಣಕ್ಕೆ ಅನುದಾನ ಒದಗಿಸುವುದನ್ನು ಪರಿಶೀಲಿಸಲಾಗುವುದು' ಎಂದು ಹೇಳಿದ್ದೀರಿ. ಇದು ಮಂಜೂರಾತಿಯಾಗಿ ಐದು ವರ್ಷಗಳಾಯಿತು. ಮಂಜೂರಾಗಿದ್ದರೂ, ಇನ್ನೂ ಅಗ್ನಿಶಾಮಕ ಠಾಣೆ ಬಂದಿಲ್ಲದ ಕಾರಣ, ಜನಗಳು ನನ್ನ ಮನೆಯ ಮುಂದೆ ಗಲಾಟೆ ಮಾಡತಕ್ಕಂಥ ವ್ಯವಸ್ಥೆಗೆ ತಾವು ಎಡೆ ಮಾಡಿಕೊಟ್ಟಿದ್ದೀರಿ. ಅವರಿಗೆ ನಾನು ಏನು ಉತ್ತರ ಹೇಳಬೇಕೆಂದು ತಾವೇ ಹೇಳಿ. ಅಗ್ನಿಶಾಮಕ ಠಾಣೆ ಇಲ್ಲದೇ ಅನೇಕ ತೊಂದರೆಗಳಾಗಿವೆ. ಮನೆಗಳಿಗೆ ಬೆಂಕಿ ಹತ್ತಿ ಉರಿದು ಹೋಗಿವೆ, ಅಂಗಡಿಗಳು ಉರಿದು ಹೋಗಿವೆ. ಇಷ್ಟಾದರೂ ಕೂಡ ಇನ್ನೂ ನೀವು, ಪರಿಶೀಲಿಸುತ್ತೇವೆ ಎಂದು ಹೇಳುತ್ತಿದ್ದೀರಿಲ್ಲಾ ! ಇನ್ನೂ ನಿಮಗೆ ಎಷ್ಟು ಕಾಲ ಬೇಕಾಗುತ್ತದೆ ? ಈಗಾಗಲೇ ಸಾಕಷ್ಟು ಕಾಲ ತೆಗೆದುಕೊಂಡಿದ್ದೀರಿ. ಅಗ್ನಿಶಾಮಕ ಠಾಣೆಗಾಗಿ ಜಮೀನನ್ನು ಕೊಡಿಸಿದ್ದೇನೆ, ಆ ಜಾಗದಲ್ಲಿ ಒಂದು ಬಾವಿಯನ್ನು ಕೂಡ ಹಾಕಿಸಿಕೊಟ್ಟಿದ್ದೇನೆ. ಆದ್ದರಿಂದ, ತಾವು ಕೂಡಲೇ ಅಗ್ನಿಶಾಮಕ ಠಾಣೆಯ ವ್ಯವಸ್ಥೆ ಮಾಡಿ ಕೊಟ್ಟರೆ ಬಹಳ ಅನುಕೂಲವಾಗುತ್ತದೆ ಎಂದು ತಮ್ಮ ಮುಂಖಾಂತರ ಕೇಳುತ್ತಿದ್ದೇನೆ.